ದಿಃ 11.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ.ಸಿ.ಎಸ್. ವಕೀಲರಿಂದ

ನರಸಿಂಹರೆಡ್ಡಿಯವರು ನಮ್ಮ ಜಮೀನಿನ ಬಳಿ ಇರುವವರು ಆಗಿದ್ದು ಅವರಿಗೂ ಹಾಗೂ ನನಗೂ ಯಾವುದೇ ರೀತಿಯಾದ ಸಂಬಂಧ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಗೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು 9ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ.

ವಾದಿಗಳು ಯಾವ ಕಾರಣಕ್ಕಾಗಿ ಈ ದಾವೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಜಮೀನಿನ ಸ.ನಂ.270/9 ಆಗಿರುತ್ತದೆ ಅದು ದಾವಾ ಅನುಸೂಚಿ ಸ್ವತ್ತಿನ ಪಶ್ಚಿಮಕ್ಕೆ ಬರುತ್ತದೆ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ.

ಸ.ನಂ.269/2 ಎ ಕ್ಕೆ ಪೂರ್ವಕ್ಕೆ ಬಂಡಿ ದಾರಿ, ಪಶ್ಚಿಮಕ್ಕೆ ಸ್ವಂತ ಜಮೀನು, ಉತ್ತರಕ್ಕೆ ಟಿ.ನರಸಾರೆಡ್ಡಿ ಯವರ ಜಮೀನು ಮತ್ತು ದಕ್ಷಿಣಕ್ಕೆ ಗಂಗಸಂದ್ರದ ಗಡಿ ಬರುತ್ತದೆ. ಮುದ್ದುಗಂಗಮ್ಮ ಮತ್ತು ರತ್ನಮ್ಮ ನಮ್ಮ ಗ್ರಾಮದವರೇ ಎನ್ನುವುದು ಸರಿ. 3 ರಿಂದ 5 ನೇ ಪ್ರತಿವಾದಿಗಳು ನಮ್ಮ ಗ್ರಾಮದವರೇ ಎನ್ನುವುದು ಸರಿ. 2013 ರಿಂದ ಮುದ್ದು ಗಂಗಮ್ಮ ಮತ್ತು ರತ್ನಮ್ಮ ನವರು ದಾವಾ ಅನುಸೂಚಿ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ನಾನು ವಾದಿಗಳು ಸ್ವಾಧೀನಾನುಭವದಲ್ಲಿರುವ ಬಗ್ಗೆ ದಾಖಲೆಗಳನ್ನು ನೋಡಿರುವು ದಿಲ್ಲ ಆದರೆ ಅವರು ನನ್ನ ತಾತನ ಕಾಲದಿಂದಲೂ ಸ್ವಾಧೀನಾನುಭವದಲ್ಲಿರುವುದು ನನಗೆ ವೈಯಕ್ತಿಕವಾಗಿ ಗೊತ್ತಿರುತ್ತದೆ. ಟ್ರಾನ್ಸ್ ಫಾರ್ಮರ್ ಮತ್ತು ಬೋರ್ ವೆಲ್‌ಗಳು ಇರುತ್ತವೆ ಎಂದು ಹೇಳಿದ್ದು ಅವುಗಳು ಸ.ನಂ.269/2 ಬಿ ಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನಲ್ಲಿ ಈಗಲೂ 1 ಮತ್ತು 2ನೇ ಪ್ರತಿವಾದಿಗಳಿಗೆ ಸ್ವಾ

ಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳಿಗೆ ಎಷ್ಟು ಜಮೀನು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

ವಾದಿಗಳಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಗೌರಿಬಿದನೂರು.